ಅವರ ಜೊತೆ ಮಾತನಾಡುತ್ತೇನೆ. ಇವತ್ತೇ ಸಾಧ್ಯವಾಗುವುದಾದರೆ ಮೂರು ಗಂಟೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ವಿಷಯದ ಮಹತ್ವವನ್ನು ಸರ್ಕಾರ ಕೂಡ ಒಪ್ಪಿದೆ. ನೀವೂ ಒಪ್ಪಿದ್ದೀರಿ, ನಾನೂ ಒಪ್ಪಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ — ತಮಗೆ ವಿಷಯದ ಮಹತ್ವ ಮನವರಿಕೆಯಾಗಿದೆ. ವಿಷಯ ಬಹಳ ಭಯಂಕರವಾಗಿರತಕ್ಕದ್ದು. ಪ್ರಪಂಚದಲ್ಲಿ ಎಲ್ಲಿಯೂ ಆಗಿರದೇ ಇರತಕ್ಕಂಥದ್ದು ಇಲ್ಲಿ ಆಗಿದೆ. ಅದು ತಮಗೆ ಮನವರಿಕೆಯಾಗಿದೆ. ಈ ಮನೆಯು ಸಮಿತಿಯು ಸಂಬಂಧಪಟ್ಟ ಹಳ್ಳಿಗೆ ಭೇಟಿ ಮಾಡಿ ಅಲ್ಲಿನ ಹರಿಜನರಿಗೆ ಮಲ ತಿನ್ನಿಸಿರುವುದರ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ ವಿಷಯದ ಮಹತ್ವದ ಬಗ್ಗೆ ತಾವು ಹೇಳಿದ್ದೀರಿ. ಬೇರೆ ಜಾತಿಯವರಿಗೆ ತಿನ್ನಿಸಿದ್ದರೆ ಯಾವ ರೀತಿಯಲ್ಲಿ ಅವರ ಮನಸ್ಸಿಗೆ ಆಘಾತವಾಗುತ್ತಿತ್ತು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಇದನ್ನು ತಾವೇ ತೂಕ ಮಾಡಿ. ನಾವೆಲ್ಲಾ ಇಲ್ಲಿ ಶಾಸಕರಾಗಿದ್ದೇವೆ.

ಅಧ್ಯಕ್ಷರು.— ಇನ್ನು ಎಷ್ಟು ಸಾರಿ ಹೇಳಬೇಕು ? ನಾನು ಮಾನ್ಯ ಗೃಹಮಂತ್ರಿಗಳ ಜೊತೆ ಮಾತನಾಡಿ ವಿಚಾರ ಮಾಡುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಗಮನ ಸೆಳೆಯುವ ಸೂಚನೆ

ಚಾಮರಾಜನಗರ ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ಕಾಡಾನೆಗಳ ಹಾವಳಿ

ಶ್ರೀ ಜಿ. ರಾಜೂಗೌಡ (ಹಸೂರು). — ಚಾಮರಾಜನಗರ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿಯಿಂದ ರೈತರ ಬೆಳೆಗಳಿಗೆ ಹಾನಿಯುಂಟಾಗಿದ್ದರಿಂದ ನಾನು ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಮೈಸೂರು ಜಿಲ್ಲೆಯ ಚಾಮರಾಜನಗರ, ಯಳಂದೂರು ಹಾಗೂ ಕೊಳ್ಳೆಗಾಲ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಿಂಡಿನಿಂದ ರೈತರು ಬೆಳೆದ ಪದಾರ್ಥ ಬೆಳೆಗಳಿಗೂ, ವಾಣಿಜ್ಯ ಬೆಳೆಗಳಿಗೂ ಹಾಗೂ ಜಾನುವಾರುಗಳಿಗೂ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಷಯದಲ್ಲಿ ನೊಂದವರಿಗೆ ಪರಿಹಾರವನ್ನು ನೀಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ

ತಾಲ್ಲೂಕಿನ ಹೆಸರು	ಆಹಾರ ಪದಾರ್ಥಗಳು		ವಾಣಿಜ್ಯ ಬೆಳೆಗಳು		ಜಾನುವಾರುಗಳು	
	ಪ್ರಕರಣಗಳು	ಪರಿಹಾರ ಧನ	ಪ್ರಕರಣಗಳು	ಪರಿಹಾರ ಧನ	ಪ್ರಕರಣಗಳು	ಪರಿಹಾರ ಧನ
೧	೨	೩	೪	೫	೬	೭
೧. ಚಾಮರಾಜನಗರ	೩೨	೬.೦೦ -೦೦	೨೧	೧೩,೦೦೦-೦೦	೧೫	೪,೦೨೦-೦೦
೨. ಯಳಂದೂರು	೬	೧.೬೦೨-೦೦	೪	೨,೦೦೦-೦೦	೩೪	೧೨,೦೦೦-೦೦
೩. ಕೊಳ್ಳೆಗಾಲ	೭೫	೫.೦೦೦-೦೦	೯	೪,೦೨೦-೦೦	—	—

ಕಾಡಾನೆಗಳ ಹಿಂಡಿನಿಂದ ಜಾನುವಾರು ಮತ್ತು ರೈತರ ಬೆಳೆಗಳಿಗೆ ಹಾನಿಯಾದಾಗ ಕೂಡಲೇ ಅವಶ್ಯಕ ಕ್ರಮ ಕೈಗೊಂಡು ನೊಂದವರಿಗೆ ಪರಿಹಾರಧನ ನೀಡಲು ಕ್ರಮಕೈಕೊಳ್ಳಲು ಸೂಚನೆ ನೀಡಲಾಗಿದೆ. ಇದಲ್ಲದೆ ಕಾಡಾನೆಗಳು ಪಾಸಗೀ ಜಮೀನುಗಳಿಗೆ ನುಗ್ಗದಂತೆ ಪ್ರತಿಬಂಧಕೋಪಾಯಗಳನ್ನು ಕೈಗೊಂಡು ಅವುಗಳ ಮೇಲೆ ನಿಗಾ ಇಟ್ಟು ಅವಶ್ಯವಿರುವಲ್ಲಿ ಓಡಿಸುವಲ್ಲಿ ಕ್ರಮ ಕೈಗೊಳ್ಳಲು ಆದೇಶ ನೀಡಲಾಗಿದೆ.

ಶ್ರೀ ಜಿ. ರಾಜೂಗೌಡ.— ಅಧ್ಯಕ್ಷರೇ, ಜನ, ಜಾನುವಾರು ಹಾಗೂ ರೈತರ ಬೆಳೆಗಳನ್ನು ಕಾಡು ಪ್ರಾಣಿಗಳಿಂದ ರಕ್ಷಿಸಲು ಸರ್ಕಾರ ಯಾವ ಯಾವ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಜನ, ಜಾನುವಾರು ಹಾಗೂ ರೈತರ ಬೆಳೆಗಳು ಕಾಡುಪ್ರಾಣಿಗಳಿಂದ ನಾಶವಾದರೆ ಪರಿಹಾರ ದೊರಕಿಸಲು ವಿಮಾ ಸೌಕರ್ಯವನ್ನು ವಿಸ್ತರಿಸುತ್ತೀರಾ ? ಮತ್ತೆ ನಷ್ಟ ಉಂಟಾದ ತಕ್ಷಣ ಪರಿಹಾರದ ಅಂದಾಜಿನಲ್ಲಿ ಶೇಕಡ ೫೦ ಭಾಗ ಹಣವನ್ನು ಸ್ಥಳದಲ್ಲೇ ಬಿಡುಗಡೆ ಮಾಡುತ್ತೀರಾ ? ಕಾಡು ಪ್ರಾಣಿಗಳಿಂದ ಸತ್ತವರ ಕುಟುಂಬದವರಿಗೆ ದೊರಕುವ ಪರಿಹಾರದ ಹಣವನ್ನು ೫೦ ಸಾವಿರದಿಂದ ೧೫ ಸಾವಿರ ರೂಪಾಯಿಗಳಿಗೆ ಏಕೆ ಮಾಡುತ್ತೀರಾ ? ಇಲ್ಲಿನ ಅರಣ್ಯ ರಕ್ಷಕರಿಗೂ ಸೈನಿಕರಿಗೆ ಗುಂಡುಹಾರಿಸಲು ತರಬೇತಿ ಕೊಡುವಂತೆ ತರಬೇತಿ ಕೊಡುತ್ತೀರಾ ? ಇದರಿಂದ ನಷ್ಟವನ್ನು ಬಹುಪಾಲು ತಡೆಗಟ್ಟಬಹುದು. ಮತ್ತೆ ಅಭಯಾರಣ್ಯದಲ್ಲಿ ಟ್ರಂಚ್ ಮುಚ್ಚಿಹೋಗಿವೆ. ಇವನ್ನು ಆಳ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಇವತ್ತು ಪರಿಹಾರ ಕೊಡುವುದು ದೊಡ್ಡದಲ್ಲ. ರೈತರ ಬೆಳೆ ನಷ್ಟ ಆಗದ ಹಾಗೆ ತಡೆಗಟ್ಟಬೇಕಾದುದು ಮುಖ್ಯ. ಕೊಳ್ಳೇಗಾಲದಲ್ಲಿ ೭೫ ಪ್ರಕರಣಗಳಲ್ಲಿ ಕೇವಲ ೫ ಸಾವಿರ ರೂಪಾಯಿಗಳ ಪರಿಹಾರಧನ ಕೊಟ್ಟಿದ್ದೀರಿ. ಇದು ಸಾಲದು ದಯಮಾಡಿ ಬೆಳೆ ರಕ್ಷಣೆ ಬಗ್ಗೆ ಇನ್ನೂ ಉಗ್ರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಶ್ರೀ ಜಿ.ಎಸ್. ಬಾಗಲಕೋಟಿ.—ನಿಯಮಾವಳಿ ಪ್ರಕಾರ ನಾವು ಪರಿಹಾರವನ್ನು ಕೊಟ್ಟಿದ್ದೇವೆ. ಯಾವ ಜಾಗದಲ್ಲಿ ಪರಿಹಾರ ಕೊಟ್ಟಿಲ್ಲವೆಂಬ ಪ್ರಕರಣವನ್ನು ಹೇಳಿದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಪರಿಹಾರಧನವನ್ನು ೫ ರಿಂದ ೧೫ ಸಾವಿರಕ್ಕೆ ಏರಿಸಬೇಕೆಂದು ಹೇಳಿದರು. ಪರಿಹಾರ ಧನವನ್ನು ೫ ಸಾವಿರದಿಂದ ೧೦ ಸಾವಿರ ರೂಪಾಯಿಗಳವರೆಗೆ ಏರಿಸಬೇಕೆಂದು ಸೂಚನೆ ಸರ್ಕಾರದ ಪರಿಶೀಲನೆಯಲ್ಲಿದೆ. ಎಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲಿ ಕಾಯ್ದೆಗೆ ಅನುಗುಣವಾಗಿ ಸೌಕರ್ಯವನ್ನು ಒದಗಿಸಲಾಗುವುದು. ಮತ್ತೆ ಎಲ್ಲೆ ಗುಂಡಿಗಳು ಮುಚ್ಚಿಹೋಗಿವೆಯೋ ಅಲ್ಲಿ ಅವನ್ನು ತೆಗೆಯಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ರಾಜೂಗೌಡ.— ಕೊಳ್ಳೇಗಾಲ ತಾಲ್ಲೂಕಿನ ಬೈಲೂರು ಅರಣ್ಯ ವಲಯದಲ್ಲಿ ಕರಡಿ ಕೈಗೆ ಸಿಕ್ಕಿ ಒಬ್ಬ ಗಿರಿಜನ ಸತ್ತು ಎರಡು ತಿಂಗಳು ಆಯಿತು. ಇನ್ನೂ ಕೂಡ ಆತನ ಕುಟುಂಬ ವರ್ಗದವರಿಗೆ ಪರಿಹಾರಧನ ಸಿಕ್ಕಿರುವುದಿಲ್ಲ. ಆತನ ಕುಟುಂಬ ವರ್ಗದವರಿಗೆ ತಕ್ಷಣ ಪರಿಹಾರ ನೀಡಲು ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಬಾಗಲಕೋಟಿ.—ಸನ್ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಅನುದಾನ ಸಂಹಿತೆ ನಿಯಮ ಳಿಗೆಕ್ಕೆ ತಿದ್ದುಪಡಿ ಮಾಡಿರುವುದರಿಂದ ಅಲ್ಪ ಸಂಖ್ಯಾತರ ಸಂಸ್ಥೆಗಳಿಗೆ ತೊಂದರೆಯಾಗಿರುವುದು

ಶ್ರೀ ಎಂ.ಎಂ. ಹಿಂಡಸಗೇರಿ.— ಅನುದಾನ ಸಂಹಿತೆ ನಿಯಮ ಳಿಗೆಕ್ಕೆ ತಿದ್ದುಪಡಿ ತಂದಿರುವುದರಿಂದ ಅಲ್ಪ ಸಂಖ್ಯಾತರ ಸಂಸ್ಥೆಗಳಿಗೆ ತೊಂದರೆಯಾಗಿರುವುದರಿಂದ ನಾನು ಮಾನ್ಯ ಪ್ರಾಥಮಿಕ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಅನುದಾನ ಸಂಹಿತೆ ನಿಯಮ ಳಿಗೆ ರಂತೆ ಅಲ್ಪ ಸಂಖ್ಯಾತರ ಶಾಲೆ ಆಡಳಿತ ಮಂಡಳಿಗಳು ಸಹ ನೌಕರರ ನೇಮಕಾತಿಗೆ ನೇಮಕಾತಿ ಸಮಿತಿಯನ್ನು ಹೊಂದಿರಲೇಬೇಕು. ಮತ್ತು ಈ ಹುದ್ದೆಗಳನ್ನು ನೇಮಕಾತಿ ಮಾಡುವ ಮೊದಲು ದಿನಪತ್ರಿಕೆಯಲ್ಲಿ ಪ್ರಕಟಿಸಿ, ಸಂದರ್ಶನಕ್ಕೆ ಕರೆದು ಅರ್ಹ ಅರ್ಥಿ ಗಳನ್ನು ಆಯ್ಕೆ ಮಾಡುವ ನಿಯಮ ಇದೆ. ಇವರಿಗೆ ವೀಸಲಾತಿ ನಿಯಮ ಅನ್ವಯಿಸುವುದಿಲ್ಲ. ಸರ್ಕಾರವು ಈ ನಿಯಮಕ್ಕೆ ತಿದ್ದುಪಡಿ ಮಾಡಿ ಜಿಲ್ಲಾವಾರು ಅನುದಾನಿತ ಪ್ರೌಢಶಾಲೆಗಳಲ್ಲಿನ ಹುದ್ದೆಗಳನ್ನು ತುಂಬುವಲ್ಲಿ ಅಭ್ಯರ್ಥಿಗಳ ಆಯ್ಕೆ ಸಮಿತಿಯನ್ನು ರಚಿಸಿದೆ. ಅಲ್ಪ ಸಂಖ್ಯಾತರ ಶಾಲೆಗಳಲ್ಲಿನ ಹುದ್ದೆಗಳಿಗೆ ವೀಸಲಾತಿ ನಿಯಮ ಅನ್ವಯಿಸುವುದಿಲ್ಲವಾದ್ದರಿಂದ ಅನುದಾನ ಸಂಹಿತೆ